# ಕರ್ನಾಟಕ ವಿಧಾನ ಪರಿಷತ್ತು

## 153ನೇ ಅಧಿವೇಶನ

| | | |
|---|---|---|
| ಚುಕ್ಕೆ ರಹಿತ ಪ್ರಶ್ನೆಸಂಖ್ಯೆ | : | **825 (921)** |
| ಸದಸ್ಯರ ಹೆಸರು | : | **ಶ್ರೀ ಸಿ.ಟಿ.ರವಿ (ವಿಧಾನ ಸಭೆಯಿಂದ ಚುನಾಯಿತರಾದವರು)** |
| ಉತ್ತರಿಸುವ ದಿನಾಂಕ | : | **24-07-2024** |
| ಉತ್ತರಿಸುವ ಸಚಿವರು | : | **ಲೋಕೋಪಯೋಗಿ ಸಚಿವರು** |

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದಲ್ಲಿ ಲೋಕೋಪಯೋಗಿ ಇಲಾಖೆಯಿಂದ ಕೈಗೆತ್ತಿಕೊಳ್ಳಲಾಗಿರುವ ಒಟ್ಟು ಕಾಮಗಾರಿಗಳೆಷ್ಟು; ಹಾಲಿ ಸ್ಥಗಿತಗೊಂಡಿರುವ ಕಾಮಗಾರಿಗಳೆಷ್ಟು; ಸ್ಥಗಿತಗೊಂಡಿರುವ ಕಾಮಗಾರಿಗಳ ಒಟ್ಟು ಮೊತ್ತ ಎಷ್ಟು; (ಕಾಮಗಾರಿಗಳು ಸ್ಥಗಿತಗೊಳ್ಳಲು ಕಾರಣವನ್ನು ಸ್ಥಗಿತಗೊಂಡಿರುವ ಕಾಮಗಾರಿಯ ಜಿಲ್ಲಾವಾರು ವಿವರದೊಂದಿಗೆ ನೀಡುವುದು)</td><td>2022-23ನೇ ಸಾಲಿನಲ್ಲಿ ಆರ್ಥಿಕ ವರ್ಷದ ಅಂತ್ಯಕ್ಕೆ ಲೋಕೋಪಯೋಗಿ ಇಲಾಖೆಯಿಂದ ವಿವಿಧ ಲೆಕ್ಕಶೀರ್ಷಿಕೆಗಳಡಿ ಒಟ್ಟಾರೆ 7490 ಸಂಖ್ಯೆಯ ಸೇತುವೆ ನಿರ್ಮಾಣ ಹಾಗೂ ರಸ್ತೆ ಅಭಿವೃದ್ಧಿ / ನವೀಕರಣ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿತ್ತು. ಆರ್ಥಿಕ ಇಲಾಖೆಯ ಸುತ್ತೋಲೆ ಸಂಖ್ಯೆ:ಆಇ 1 ಟಿಎಫ್‌ಪಿ 2023 ದಿ:-22-05-2023ರನ್ವಯ ಸದರಿ ಕಾಮಗಾರಿಗಳ ಪೈಕಿ ಪ್ರಾರಂಭವಾಗದ ರೂ.1578.41 ಕೋಟಿ ಮೊತ್ತದ 721 ಸಂಖ್ಯೆಯ ಕಾಮಗಾರಿಗಳನ್ನು ತಡೆಹಿಡಿಯಲಾಗಿರುತ್ತದೆ. ತಡೆಹಿಡಿಯಲಾಗಿರುವ ಕಾಮಗಾರಿಗಳ ವಿಭಾಗವಾರುವ ವಿವರಗಳನ್ನು ಅನುಬಂಧ-1 ರಲ್ಲಿ ಒದಗಿಸಿದೆ</td></tr>
<tr><td>ಆ)</td><td>ಕಳೆದ ಒಂದು ವರ್ಷದಿಂದ ಪ್ರಗತಿಯಲ್ಲಿರುವ ಕಾಮಗಾರಿಗಳೂ ಸೇರಿದಂತೆ ಹೊಸ ರಸ್ತೆ ಹಾಗೂ ಸೇತುವೆ ನಿರ್ಮಾಣಕ್ಕೆ ಇಲಾಖೆಯಿಂದ ಬಿಡುಗಡೆ ಮಾಡಿರುವ ಅನುದಾನ ಎಷ್ಟು;</td><td>ಲೋಕೋಪಯೋಗಿ ಇಲಾಖೆಯಿಂದ ಕೈಗೊಳ್ಳಲಾಗಿರುವ ರಸ್ತೆ ಮತ್ತು ಸೇತುವೆ ಕಾಮಗಾರಿಗಳಿಗೆ 2023-24 ಹಾಗೂ 2024-25ನೇ ಸಾಲಿನ ಜುಲೈ-2024ರ ಅಂತ್ಯಕ್ಕೆ ಬಿಡುಗಡೆ ಮಾಡಿರುವ ಅನುದಾನದ ವಿವರ ಕೆಳಕಂಡಂತಿದೆ.<br>(ರೂ.ಕೋಟಿಗಳಲ್ಲಿ)
<table>
<tr><th>ಕ್ರ. ಸಂ</th><th>ವರ್ಷ</th><th>ಬಿಡುಗಡೆ ಮಾಡಿದ ಮೊತ್ತ</th></tr>
<tr><td>1</td><td>2023-24</td><td>8314.66</td></tr>
<tr><td>2</td><td>2024-25 (ಜುಲೈ-24)</td><td>2396.23</td></tr>
<tr><td></td><td>ಒಟ್ಟು</td><td>10710.89</td></tr>
</table></td></tr>
<tr><td>ಇ)</td><td>ಕಾಮಗಾರಿಗಳು ಸ್ಥಗಿತಗೊಂಡಿರುವುದರಿಂದ ಗುತ್ತಿಗೆದಾರರಿಗೆ ನಷ್ಟ ಉಂಟಾಗುವುದರ ಜೊತೆಗೆ ಕಾಮಗಾರಿಯ ಅಂದಾಜು ವೆಚ್ಚದಲ್ಲೂ ಹೆಚ್ಚಳಗೊಂಡು ಅಭಿವೃದ್ಧಿ ಕುಂಠಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಸ್ಥಗಿತಗೊಂಡಿರುವ ಕಾಮಗಾರಿಯನ್ನು ಮತ್ತೆ ಆರಂಭಿಸಲು ಸರ್ಕಾರ ಯಾವ ಕ್ರಮಕೈಗೊಂಡಿದೆ; ಅಗತ್ಯ ಅನುದಾನ ಬಿಡುಗಡೆ ಮಾಡಲಾಗಿದೆಯೇ;</td><td>ತಡೆಹಿಡಿಯಲಾಗಿದ್ದ ಕಾಮಗಾರಿಗಳ ಪೈಕಿ ಟೆಂಡರ್ ಅಂತಿಮಗೊಂಡಿದ್ದ, ಕಾರ್ಯಾದೇಶ ನೀಡಿದ್ದ ಹಾಗೂ ಟೆಂಡರ್ ಪ್ರಕ್ರಿಯೆ ಹಂತದಲ್ಲಿದ್ದ (ತಾಂತ್ರಿಕ ಮತ್ತು ಆರ್ಥಿಕ ಬಿಡ್) ಕಾಮಗಾರಿಗಳನ್ನು ಮುಂದುವರೆಸಲು ಅನುಮೋದನೆ ನೀಡಲಾಗಿರುವುದರಿಂದ ಗುತ್ತಿಗೆದಾರರಿಗೆ ನಷ್ಟ ಹಾಗೂ ಅಂದಾಜು ವೆಚ್ಚದಲ್ಲಿ ಹೆಚ್ಚಳ ಉಂಟಾಗಿರುವುದಿಲ್ಲ ಹಾಗೂ ಅಭಿವೃದ್ಧಿ ಕುಂಠಿತಗೊಂಡಿರುವುದಿಲ್ಲ.</td></tr>
</table>

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಈ) | ಲೋಕೋಪಯೋಗಿ ಇಲಾಖೆಯಲ್ಲಿ ವಿವಿಧ ಲೆಕ್ಕಶೀರ್ಷಿಕೆಗಳಡಿ ಪೂರ್ಣಗೊಂಡಿರುವ ಕಾಮಗಾರಿಗಳಿಗೆ ನೀಡಲು ಬಾಕಿ ಇರುವ ಬಿಲ್ ಮೊತ್ತ ಎಷ್ಟು; (ಲೆಕ್ಕಶೀರ್ಷಿಕೆವಾರು ವಿಭಾಗವಾರು ವಿವರ ನೀಡುವುದು) | ಲೋಕೋಪಯೋಗಿ ಇಲಾಖೆಯಲ್ಲಿ ವಿವಿಧ ಲೆಕ್ಕಶೀರ್ಷಿಕೆಗಳಡಿ ಬಾಕಿಯಿರುವ ಬಿಲ್ಲುಗಳ ವಿಭಾಗವಾರು ವಿವರಗಳನ್ನು ಅನುಬಂಧ-2 ರಲ್ಲಿ ಒದಗಿಸಿದೆ. |
| ಉ) | ಕಳೆದ ಒಂದು ವರ್ಷದಿಂದ ಈ ಉದ್ದೇಶಕ್ಕಾಗಿ ಬಿಡುಗಡೆ ಮಾಡಿರುವ ಹಣ ಎಷ್ಟು; ಯಾವ ಯಾವ ಗುತ್ತಿಗೆದಾರರಿಗೆ ಬಿಲ್ ಪಾವತಿಸಲಾಗಿದೆ? (ಅವರು ನಿರ್ವಹಿಸಿರುವ ಕಾಮಗಾರಿಗಳ ಸಹಿತ ವಿವರ ನೀಡುವುದು) | ಲೋಕೋಪಯೋಗಿ ಇಲಾಖೆಯಲ್ಲಿ ಕಳೆದ ಒಂದು ವರ್ಷದಿಂದ ಇಲ್ಲಿಯವರೆಗೂ ವಿವಿಧ ಲೆಕ್ಕಶೀರ್ಷಿಕೆಗಳಡಿ ಗುತ್ತಿಗೆದಾರರು ನಿರ್ವಹಿಸಿರುವ ಕಾಮಗಾರಿಗಳ ವಿವರ ಹಾಗೂ ಸದರಿ ಕಾಮಗಾರಿಗಳಿಗೆ ಪಾವತಿಸಿರುವ ಮೊತ್ತದ ವಿವರಗಳನ್ನು ಅನುಬಂಧ-3ರಲ್ಲಿ ಒದಗಿಸಿದೆ. |

ಸಂ:ಲೋಇ/328/ಐಎಫ್ಎ/2024 (ಇ-ಕಛೇರಿ)

**ಸತೀಶ ಜಾರಕಿಹೊಳಿ**
(ಲೋಕೋಪಯೋಗಿ ಇಲಾಖೆ ಸಚಿವರು)